**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 839/2017

CW -1 PW - 1

| | | |
|---|---|---|
| ಹೆಸರು | ಃ | ದೇವಿರಮ್ಮ |
| ಗಂಡನ ಹೆಸರು | ಃ | ನಾಗರಾಜು |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ದೇವಸ್ದಾನದಲ್ಲಿ ಪೂಜಾರಿ |
| ವಾಸ | ಃ | ಉಯ್ಯಂಬಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 02.07.2022

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಚಾಸಾ-2 ಪಾರ್ವತಮ್ಮ ರವರ ಪರಿಚಯವಿದೆ. ಚಾಸಾ-3 ರವಿ ನನ್ನ ಅಕ್ಕನ ಅಳಿಯ ಮತ್ತು ಚಾಸಾ-4 ಶಿವು ನಮ್ಮ ಮನೆಯ ಪಕ್ಕದವರು.

ದೂರಿನಲ್ಲಿರುವ ಸಹಿ ನನ್ನದು. ಸದರಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ23.03.2016 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ದೇವಸ್ದಾನದಲ್ಲಿ ಗಲಾಟೆಯಾದ ವಿಚಾರಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿದ್ದೇನೆ. ಸದರಿ ದಿನಾಂಕ ಮತ್ತು ಸಮಯದಂದು ಆರೋಪಿ ಮನೆಯಲ್ಲೇ ಇರುವ ದೇವಸ್ಥಾನಕ್ಕೆ ನುಗ್ಗಿ ದೊಡ್ಡಮ್ಮ ಮತ್ತು ಚಿಕ್ಕಮ್ಮ ದೇವರ ಒಡವೆಗಳನ್ನು ತೆಗೆಯುತ್ತಿದ್ದರು. ಶಬ್ದ ಕೇಳಿ ನಾನು ಅಲ್ಲಿಗೆ ಹೋಗಿ ಯಾಕೆ ನುಗ್ಗಿದ್ದೀಯಾ ಎಂದು ಕೇಳಿದೆ. ಆಗ ಚಿನ್ನಾಭರಣವೆಲ್ಲಾ ಚೆಲ್ಲಾಪಿಲ್ಲಿಯಾಗಿತ್ತು. ನಾನು ಆತನನ್ನು ಪ್ರಶ್ನಿಸಿದಾಗ ಆತ ನನ್ನ ಕಪಾಳಕ್ಕೆ ಹೊಡೆದು, ಜೀವ ಬೆದರಿಕೆ ಹಾಕಿದನು. ಆ ವೇಳೆಗೆ ಪಕ್ಕದ ಮನೆಯ ಹುಡುಗ ಚಾಸಾ-4 ಶಿವು ಬಂದರು. ಅವರು ಬಂದ ತಕ್ಷಣ ಆರೋಪಿ ಅಲ್ಲಿಂದ ಹೊರಟು ಹೋದ.

ನಾವು ತದನಂತರ ಪೋಲೀಸರಲ್ಲಿ ದೂರನ್ನು ಸಲ್ಲಿಸಿದೆವು. ಆಗ ಪೋಲೀಸರು ಅದೇ ದಿನ ಮನೆಯ ದೇವಸ್ದಾನಕ್ಕೆ ಸುಮಾರು ಸಂಜೆ 4 ರ ಸಮಯಕ್ಕೆ ಬಂದರು. ಒಡವೆಗಳನ್ನು ಮಹಜರ್ ಮಾಡಿದರು. ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು, ಮಹಜರ್ ಅನ್ನು ನಿಪಿ-

2 ಎಂದು  ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ನ್ನು 4 ಗಂಟೆಯಿಂದ 5.30 ಗಂಟೆಯವರೆಗೆ ಮಾಡಿದರು.

**<u>ಪಾಟೀ ಸವಾಲು : ಆರೋಪಿ ಪರ ಎಟಿಎಸ್ ವಕೀಲರಿಂದ</u>**

ಚಾಸಾ-2 ಪಾರ್ವತಮ್ಮ ನನ್ನ ಸ್ವಂತ ಅಕ್ಕ.  ಅವರ ಗಂಡನ ಹೆಸರು ನಾಗರಾಜು. ಚಾಸಾ-2 ಇವರು ನನ್ನ ಗಂಡನ ಮೊದಲನೇ ಹೆಂಡತಿ.  ಅವರು ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ನಮ್ಮ ಮನೆಯ ಮುಂದುಗಡೆ  ಚಾಸಾ-2 ರವರ ಮನೆ ಇದೆ. ಚಾಸಾ-3 ಇವರು ಏಳಗಳ್ಳಿ ಯಲ್ಲಿ ವಾಸವಾಗಿದ್ದಾರೆ. ಚಾಸಾ-3 ನಾಗರಾಜು ರವರಿಗೆ ಅಳಿಯ ಆಗಬೇಕು. ಚಾಸಾ-4 ಶಿವು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಆರೋಪಿಯವರನ್ನು ನಾನು 10 ವರ್ಷದಿಂದ ನೋಡುತ್ತಿದ್ದೇನೆ. ನಾನು ಪೂಜೆಯ ಕೆಲಸವನ್ನು 10 ವರ್ಷದಿಂದ  ಮಾಡುತ್ತೇನೆ.  ನಾನು ದೊಡ್ಡಮ್ಮ ಚಿಕ್ಕಮ್ಮ ದೇವರ ಪೂಜೆ ಕೆಲಸ ಮಾಡುತ್ತಿದ್ದೇನೆ. ದೇವಸ್ಥಾನ ಹಾಗೂ ನಾವು ಇರುವುದು ಅದೇ ಜಾಗದಲ್ಲೆ. ನಾವು ದೇವಸ್ಥಾನಕ್ಕೆ ಹಿಂದುಗಡೆಯಿಂದ ಓಡಾಡುತ್ತೇವೆ. ಆರೋಪಿಯವರ ಮನೆ ನಮ್ಮ ಮನೆಯಿಂದ 2 ಮನೆ ಬಿಟ್ಟು ಇದೆ. ನಾವು ವಾಸವಾಗಿರುವ ಮನೆ ನಮ್ಮ ಬಾವ ನಾಗರಾಜ್ ರವರಿಗೆ ಸೇರಿದ್ದು, ಅವರು ಅದನ್ನು ದೇವಸ್ಥಾನಕ್ಕೆ ಬರೆದುಕೊಟ್ಟಿದ್ದಾರೆ. ನಾಗರಾಜು ರವರು ಚಾಸಾ-2 ಪಾರ್ವತಮ್ಮರವರ ಜೊತೆಗೆ ಇದ್ದಾರೆ. ದೇವಸ್ಥಾನ ಇರುವ ಮನೆಯಲ್ಲೇ ದನಕರುಗಳನ್ನು ಸಹ ಸಾಕುತ್ತಿದ್ದೇನೆ. ಈ ಪ್ರಕರಣದ ದೂರು ನೀಡಿದ ಸಂದರ್ಭದಲ್ಲಿ ದನಕರುಗಳನ್ನು ಕಟ್ಟಲು ಹಿತ್ತಲು ಇತ್ತು.

ನನ್ನ ಗಂಡ ವುಡ್ ಆಫೀಸ್ ನಲ್ಲಿ ಕೆಲಸ ಮಾಡುತ್ತಾರೆ. ಈಗ ನಿವೃತ್ತಿ ಹೊಂದಿದ್ದಾರೆ. ಈ ಪ್ರಕರಣದ ಘಟನೆ ನಡೆದ ಸಂದರ್ಭದಲ್ಲಿ ನನ್ನ ಗಂಡ 5 ಗಂಟೆಗೆ ಕೆಲಸಕ್ಕೆ ಹೋಗಿ ರಾತ್ರಿ 8.30 ಕ್ಕೆ ವಾಪಸ್ಸು ಬರುತ್ತಿದ್ದರು. ಗಲಾಟೆಯಾದ ಸಂದರ್ಭದಲ್ಲಿ ಮನೆಯಲ್ಲಿ ನಾನು ಒಬ್ಬಳೇ ಇದ್ದೆ. ದಿಃ23.03.2016 ರಂದು ಗಲಾಟೆಯಾಯಿತು. 3ನೇ ತಿಂಗಳು ಯಾವುದು ಎಂದು ನನಗೆ ಗೊತ್ತಿಲ್ಲ. ಗಲಾಟೆ ಮದ್ಯಾಹ್ನ 1 ಗಂಟೆ ಸಮಯದಲ್ಲಿ ಆಯಿತು. ಆರೋಪಿ ಮನೆಗೆ ನುಗ್ಗಿ ದೇವರ ಮೇಲಿನ ಒಡವೆಗಳನ್ನು ಚೆಲ್ಲಾಪಿಲ್ಲಿ ಮಾಡುತ್ತಿದ್ದರು. ಆಗ ನಾನು ಅವರನ್ನು ಪ್ರಶ್ನಿಸಿದೆ. ಆಗ ಆರೋಪಿ ನನಗೆ ಕಪಾಳಕ್ಕೆ ಹೊಡೆದು ಜೀವ ಬೆದರಿಕೆ ಹಾಕಿದ. ಗಲಾಟೆಯಾದ

ಸಂದರ್ಭದಲ್ಲಿ ಚಾಸಾ-4 ಶಿವುರವರು ಸ್ಥಳಕ್ಕೆ ಬಂದರು. ಶಿವು ಬಂದ ನಂತರ ಆರೋಪಿ ಅಲ್ಲಿಂದ ಹೊರಟು ಹೋದ. ನಂತರ ನಾನು ಮತ್ತು ಚಾಸಾ-4 ಶಿವು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು. ನಾವು ಮದ್ಯಾಹ್ನ 2 ರ ಸುಮಾರಿಗೆ ಪೋಲೀಸ್ ಠಾಣೆಯಲ್ಲಿದ್ದೆವು. ದೂರನ್ನು ಸಾಹೇಬರ ಆದೇಶದ ಮೇರೆಗೆ ಒಬ್ಬರು ಬರೆದರು. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ದೂರಿಗೆ ಸಹಿ ಹಾಕಿ ವಾಪಸ್ಸು ಬಂದಿರುತ್ತೇನೆ.

ಪೋಲೀಸರು ಮಹಜರ್ ಮಾಡಲು ದೇವಸ್ಥಾನಕ್ಕೆ ಬಂದು ದೇವಸ್ಥಾನದಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಒಡವೆಗಳನ್ನು ನೋಡಿದರು. ಮಹಜರ್ ಮಾಡುವ ಸಮಯದಲ್ಲಿ ಅಕ್ಕಪಕ್ಕದ ಜನ ಮತ್ತು ಪೋಲೀಸರು ಇದ್ದರು. ಮಹಜರಿನಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರ್ ಗೆ ಯಾರು ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾವು ಮನೆ ಹಿಂದುಗಡೆ ಇರುವ ಆರೋಪಿಗೆ ಸೇರಿದ 25 ಅಡಿ ಜಾಗದಲ್ಲಿ ಓಡಾಡುತ್ತೇವೆಂದರೆ ಸರಿಯಲ್ಲ. ಈ ಘಟನೆಯಾದ ಸಮಯದಲ್ಲಿ ನಾವು ಆರೋಪಿಗೆ ಸೇರಿದ ಜಾಗದಲ್ಲಿ ಓಡಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾವು ಅವರ ಜಾಗದಲ್ಲಿ ಓಡಾಡುತ್ತಿದ್ದ ಕಾರಣ ನಮಗೂ ಹಾಗೂ ಆರೋಪಿಗೂ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ಹಳೆಯ ವೈಷಾಮ್ಯ ಇದ್ದ ಕಾರಣ ಆರೋಪಿಗೆ ತೊಂದರೆ ಕೊಡಲು ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ. ದೂರಿನ ಮೇರೆಗೆ ಪೋಲೀಸರು ಸ್ಥಳದಲ್ಲಿ ಬಂದು ಮಹಜರ್ ಮಾಡಿಲ್ಲ, ಪೋಲೀಸ್ ಠಾಣೆಯಲ್ಲಿಯೇ ನಿಪಿ-2 ನ್ನು ತಯಾರಿಸಿದ್ದಾರೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ